Regd No M 1299 34 th Year ತಾ 30—3—51

SATYAVADI

ಸತ್ಯವಾದಿ

ಸಂಸ್ಥಾಪಕರು- ಆರಮನೆ ಸಿರಸ್ತೆದಾರ್ ಎಂ. ವಿ. ಸುಬ್ಬಾಯರು [ಬಿಡಿ ಪ್ರತಿ 3 ಪೈ

ಹೆದರಾಬಾದ್ ನಿಜಾಂರ ಮೇಲೆ ಭಾರತ ಸರ್ಕಾರಕ್ಕೆ ದೂರು ?

ಅರ್ಧ ಲಕ್ಷ ಟನ್ ಗೋಧಿ ತರಿಸೋದ್ರಲ್ಲಿರೋ ತಾಪತ್ರಯ

ದಿವ್ಯ ವಾಣಿ

ನೀವು ಮುನ್ನಡೆಯಿಡದಿದ್ದರೆ ನಿನ್ನ್ನು ದೈವಿಕ ಶಕ್ತಿ ಘೋರ ದಂಡನೆಗೀಡು ಮಾಡುತ್ತದೆ ಮತ್ತು ನಿನ್ನ ಸ್ಥಾನದಲ್ಲಿ ಅದು ಇತರರನ್ನು ತಂದಿಡುತ್ತದೆ.

— ಕುರಾನ್

ಬಟ್ಟೆ ಹತೋಟಿ ರದ್ದಾಗಲಿ

ಮೈಸೂರು ಪೌರಸಭೆಯಲ್ಲಿ ನಿನ್ನೆ ಬಟ್ಟೆ ನಿರ್ಣಯದ ಮೇಲೆ ಮಾತನಾಡುತ್ತ ಜನಾಬ್ ಅಹಮದ್ ಖಾರ್ ರವರು, ಬಟ್ಟೆ ನಿಯಂತ್ರಣ ಹೋದರೆ ಸರನೋತ್ತಮ ಅದರಿಂದ ಮೊದಲೆರಡು ತಿಂಗಳು ತ್ರಾಸವಾದರೂ ಮುಂದಕ್ಕೆ ಭಾರಿ ಸುಖವಿದೆ ಎಂದರು.

ತಿರಸ್ಕಾರ

ಕೆಂಪು ಚೀನ ಸರ್ಕಾರ ಜ|| ಮೆಕಾರ್ಥರರ ಶಾಂತಿ ಸಂದೇಶವನ್ನು ತಿರಸ್ಕರಿಸಿತೆಂದು ಟೋಕಿಯೋ ವಾರ್ತೆ.

ರಾಜಧಾನಿಯಲ್ಲಿ ರಾಜೇಂದ್ರರು

ನುಂದಿನ ಮಾಹೆ 9 ರಲ್ಲಿ ಮದರಾಸಿನಿಂದ ಮೈಸೂರಿಗೆ ಬೆಳಿಗ್ಗೆ 10 ಗಂಟೆಗೆ ಆಗಮಿಸುವರು. ಸಚಿವರೊಡನೆ 11 ವರೆಗೆ ಮಿಲನ. 4ಮುಕ್ಕಾಲು ಗಂಟೆಗೆ ನಾಗರಿಕ ಸ್ವಾಗತ. ಸಂಜೆ 6 ಗಂಟೆಗೆ ಚಾಮುಂಡಿಜಂಖಾನದಲ್ಲಿ ಸಂತೋಷ ಕೂಟ. ರಾತ್ರಿ 8 ಗಂಟೆಗೆ ಕನ್ನಂಬಾಡಿ ಕಟ್ಟೆಯಲ್ಲಿ ಭೋಜನಕೂಟ. 9ಮುಕ್ಕಾಲಿಗೆ ಚಾಮುಂಡಿಬೆಟ್ಟ 10 ನೇ ತಾ|| ಬೆಳಿಗ್ಗೆ 9 ವರೆಗೆ ವಿಶೇಷ ಘಟನೋತ್ಸವ. 11 ನವಿಗೆ ಬೆಂಗಳೂರಿಗೆ ವಿಮಾನದಲ್ಲಿ ಹಾರುವರು.

ಭಾರತ ಸರ್ಕಾರದ ಆಹಾರ ಶಾಖೆಯ ಉಪಸಚಿವರಾದ ಶ್ರೀ ಎಂ. ತಿರುಮಲಾಚಾರಿಯವರು ಬೊಂಬಾಯಿನಲ್ಲಿ ಇತ್ತೀಚೆಗೆ ಹೇಳಿಕೆಯಲ್ಲಿ ಸೆಣಬಿಗೆ ಬದಲಾಗಿ ರಷ್ಯ ಅರ್ಧ ಲಕ್ಷ ಟನ್ ಗೋಧಿ ಕೊಡುತ್ತೇನೆಂದು ತಿಳಿಸಿರುವ ಅಂಶ ಸರ್ಕಾರದ ಪರಿಶೀಲನೆಯಲ್ಲಿದೆಯೆಂದರು ಕೇವಲ ಕಚ್ಚಸೆಣಬನ್ನು ರಷ್ಯ ಬದಲು ಕೇಳಿರುವದು ವ್ಯವಹಾರ ಕಷ್ಟವಾದುದೆಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ಭೀತಿ ಕಡಿಮೆಯಾಗಿದೆ

ಪಂ|| ನೆಹರು ಪಾರ್ಲಿಮೆಂಟಿನಲ್ಲಿ ನ್ನೆ ಹೇಳಿಕೆ ಕೊಟ್ಟು ಕಳೆದ ಎರಡುಮೂರು ತಿಂಗಳಿಂದ ಯುದ್ಧಭೀತಿ ಇಳಿದಿದೆಯೆಂದರು.

ಈ ದಿವಸ ವಿರೋಧ ವಕ್ತತೆ

ಭಾರತ ಪ್ರತಿನಿಧಿ ಸ್ಟರ್ ಬಿ. ಎನ್. ರಾಯರು ಕಾಶ್ಮೀರ ಬಗ್ಗೆ ಬ್ರಿಟಿಷ್-ಅಮೇರಿಕ ನಿರ್ಣಯವನ್ನು ವಿರೋಧಿಸುವ ದಿನ ಇಂದು ಎಂದು ಲೇಕ್‌ಸಕ್ಸಸ್‌ನಿಂದ ಗೊತ್ತಾಗಿದೆ.

ದೆಹಲಿ ಮೇಲೆ ವಿಮಾನ !

ನಿನ್ನೆ ಬೆಳಿಗ್ಗೆ ದೆಹಲಿ ಮೇಲೆ ವಿದೇಶ ವಿಮಾನವೊಂದು ಹಾರಿತು.

× ಸಿನಿಮಾ ಸ್ಥಾನಕ್ಕೆ ರೂ. 1 ವರೆಯುಂತೆ ಸೀಟಿಂಗ್ ತೆರಿಗೆಯನ್ನು ಮೈಸೂರು ಸರ್ಕಾರ ವಿಧಿಸಿದೆ.

× ಭಾರತದ 3 ಸಹಸ್ರ ಚಿತ್ರಮಂದಿರಗಳಲ್ಲಿ ಕಳೆದ ಸಾಲಿನಲ್ಲಿ 50 ಕೋಟಿ ಮಂದಿ ಡಾಕ್ಯುಮೆಂಟ್ರಿ ಮತ್ತು ವಾರ್ತೆ ಚಿತ್ರ ನೋಡಿದ್ದಾರೆ.

ಪೌರಸಭೆ

ಮೈಸೂರು ಪೌರಸಭೆಯ ಸಾಧಾರಣ ಅಧಿವೇಶನ ನಿನ್ನೆ ಸಂಜೆ ಶ್ರೀ ಟಿ. ನರಸಿಂಹಯ್ಯಂಗಾರ್ಯರವರ ಅಧ್ಯಕ್ಷತೆಯಲ್ಲಿ ಸಮಾವೇಶಗೊಂಡಿತ್ತು.

ಔಷಧಿ ಸರಬರಾಜು ಸರಿಯಾಗಲಿ

ಮೈಸೂರು ನಿಟಿಯಲ್ಲಿರತಕ್ಕ ಮೊಹಲ್ಲ ಆಸ್ಪತ್ರೆಗಳಲ್ಲಿ ಔಷಧಿಯು ಸಾಮಾನುಗಳು ಇಲ್ಲದೆ ಬಡ ಜನಗಳಿಗೆ ಸರಿಯಾದ (ಉತ್ತಮ) ರೀತಿಯಲ್ಲಿ ಚಿಕಿತ್ಸೆ ನಡೆಸಲು ತೊಂದರೆಯಾಗಿರುತ್ತೆ. ಆದಕಾರಣ ಸರ್ಕಾರದವರು ಸದರಿ ಆಸ್ಪತ್ರೆಗಳಿಗೆ ಸಾಕಾದಷ್ಟು ಔಷಧಿಯ ಸಾಮಾನುಗಳನ್ನು ಸಪ್ಲೈ ಮಾಡಿ ಜನಗಳ ಸೌಕರ್ಯಕ್ಕೆ ಶಕ್ತ ಏರ್ಪಾಡು ಮಾಡಬೇಕೆಂದು ಈ ಸಭೆಯು ಸರ್ಕಾರವನ್ನು ಪ್ರಾರ್ಥಿಸುತ್ತದೆ - ಎಂಬ ನಿರ್ಣಯ ಅಂಗೀಕೃತವಾಯಿತು.

ಉಗಾದಿಗೆ ಬಟ್ಟೆ ಹಂಚಿಕೆ

[illegible] ಯುತ್ತಿದ್ದರಲ್ಲಿ ಉಂಟಾಗಿರುವ [illegible] ಯುತ್ತಿದ ಬಗ್ಗೆ ನೆಹ್ರು ನುಡಿ [illegible]ಂಗಳು ಮೊದಲಲ್ಲಿ ದೆಹ[illegible]ವಾಗುವ ಭಾರತ[illegible]ಿ. ಕಾಂಗ್ರೆಸ್ [illegible]ುತ್ತವ[illegible]ು ಮು[illegible] ಸಬೇಕು ಅಂಗೀಕೃತವಾ[illegible]

×

ಅಭಾವಕಾಲದಲ್ಲೂ ನೆಷ್ಟ

ನ್ಯೂಸ್‌ಪ್ರಿಂಟ್‌ಗೆ ಈಗ ತೀವ್ರಾಭಾವ. ಇದರ ಜೊತೆಗೆ ಕಲ್ಕತ್ತಾದಲ್ಲಿ ನಿನ್ನೆ ಒಂದು ಲಕ್ಷ ರೂ. ಬಾಳುವ ಕಾಗದ ಸುಟ್ಟುಬೂದಿಯಾಯಿತು.

ರೇಷ್ಮೆ ಹೆಚ್ಚಿಸಿಲು - ಈಗ ಸಾಧ್ಯವೇ ಇಲ್ಲ !

ಅಮೇರಿಕದಿಂದ ಧಾನ್ಯ ಬಂದ ನಂತರ ಶೇ 25 ಇಳುವರಿಯನ್ನು ತೆಗೆದು ಮುನ್ನವಿದ್ದಂತೆ ಪಡಿತರ ಹಂಚಲಾಗುವದು - ಎಂದು ಬೊಂಬಾಯಿನಲ್ಲಿ ಶ್ರೀ ಬಿ. ತಿರುಮಲರಾವ್ ಹೇಳಿಕೆ ಇತ್ತಿರುವರು.

ಕಮ್ಯುನಿಸಂ ನಾಶಕ್ಕೆ ಸಲಹೆ

ಸಮಾಜವಾದಿ ಸಕ್ಷದ ಶ್ರೀ ಜಯಪ್ರಕಾಶ್ ನಾರಾಯಣ್ ಬೊಂಬಾಯಿನಲ್ಲಿ ಹೇಳಿಕೆಯಿತ್ತು ವಿಶ್ವದ ಸ್ವತಂತ್ರರಾಜ್ಯಗಳೆಲ್ಲ ಸಂಘಟಿತವಾಗಿ ಕಮ್ಯುನಿಸಂ ದಹನಕ್ಕೆ ಸೂಕ್ತ ಪರಿಸ್ಥಿತಿ ನಿರ್ಮಿಸಬೇಕು - ಎಂದಿರುವರು.

ವಿಕ್ರಯ ಜರಗುತ್ತಿದೆ

ಪರ ರಾಜ್ಯಗಳಲ್ಲಿ ಹೈದರಾಬಾದಿನ ನಿಜಾಮರು ಅತ್ಯಧಿಕ ಮೌಲ್ಯದ ವಜ್ರ ಮುತ್ತಿನ ಆಭರಣಗಳನ್ನು ವಿಕ್ರಯಮಾಡಿಸುತ್ತಿರುವದಾಗಿ ಪ್ರಬಲವದಂತಿ ಎದ್ದು, ವಿಕ್ರಯ ಮಾಡುತ್ತಿರುವದನ್ನು ತಡೆಗಟ್ಟಬೇಕೆಂದು ಭಾರತ ಸರ್ಕಾರಕ್ಕೆ ಅನೇಕ ಮಂದಿ ದೂರು ಕೊಟ್ಟಿರುವದಾಗಿ ಗೊತ್ತಾಗಿದೆ.

ಕೋಟಿಗಟ್ಲಿ ಸಂಪಾದನೆ

ಹೋದ ವರ್ಷ ಭಾರತದ ಎಲ್ಲ ಚಿತ್ರಮಂದಿರಗಳಲ್ಲೂ ಉತ್ಪತ್ತಿಯಾಗಿರುವ ಒಟ್ಟು ರೂ. 18 ಕೋಟಿ ಎಂದು ದೆಹಲಿ ವಾರ್ತೆ.

ದಾನಪ್ಪನವ[illegible]

ಸಚಿವ ಶ್ರೀ [illegible] ಮಂ. ಶ್ರೀ ಕೆ. ಸಿ. [illegible] ಗ್ಯ ಸ್ಯಯುಕ್ತ ತಾತ್ಕಾಲಿಕ ಮುಖ್ಯಮಂತ್ರಿಗಳ ಅಧಿಕಾರವನ್ನು ಬೆಂಗಳೂರಿ[illegible]

ಭಾರತ ಸ[illegible]

ಭಾ[illegible] ಕಾ[illegible] 5[illegible]

ಹಲ್ಲು ಮುರಿಸಿಕೊಂಡ ಕಥೆ

ರಾಘವಾಂಕ ಕವಿಯು ಹರಿಶ್ಚಂದ್ರ ಕಾವ್ಯವನ್ನು ಬರೆದು ತನ್ನ ಗುರುವೂ ಆದ ಹರಿಹರ ಕವಿಯ ಕಡೆಗೆ ಒಯ್ದು ತೋರಿಸಿದನಂತೆ. ಹರಿಶ್ಚಂದ್ರನನ್ನ ಕಾವ್ಯದ ನಾಯಕನನ್ನಾಗಿ ಮಾಡಿ ಕಾವ್ಯ ರಚಿಸಿದ್ದು ಹರಹರನ ಮನಸ್ಸಿಗೆ ಬರಲಿಲ್ಲ. ಆಗ ಅತನು ಸಿಟ್ಟಿಗೆದ್ದು ರಾಘವಾಂಕನ ಕಪಾಳಕ್ಕೆ ಹೊಡಿದನಂತೆ. ಅದರಿಂದಾಗಿ ರಾಘವಾಂಕನ ಐದು ಹಲ್ಲುಗಳು ಮುರಿದುಬಿದ್ದವು. ಮುಂದೆ ಅತನು ಸಿದ್ಧರಾಮ ಪುರಾಣ, ಸೋಮನಾಥ ಚರಿತ್ರೆ, ನಂಭ ಚಾರಿತ್ರ, ಹರಿಹರ ಮಹತ್ವ— ಹೀಗೆ ಐದು ಕಾವ್ಯಗಳನ್ನು ರಚಿಸಿದಾಗ ಒಂದೊಂದಾಗಿ ಐದು ಹಲ್ಲುಗಳೂ ತಿರುಗಿ ಬಂದವಂತೆ. ಇದೊಂದು ನಮ್ಮ ಸಾಹಿತ್ಯ ಚರಿತ್ರೆಯಲ್ಲಿಯ ದಂತ ಕಥೆ. ಇದಕ್ಕೆ ಹಲ್ಲುಮುರಿದುಕೊಂಡ ಕಥೆ ಎಂದೂ ಅರ್ಥ ಹಚ್ಚಬಹುದು.

(ಕ ನ.)

ಪುರುಷನೂ ಕಾಮವಾಸನೆಯೂ

ಪುರುಷನಿಗೆ ಹಗಲಿರುಳು ಕಾಮವಾಸನೆಯಲ್ಲಿ ತಲ್ಲೀನನಾಗಲು ಅಧಿಕಾರ ವಿಲ್ಲ. ಅತನು ಹೆಂಡತಿಯೊಡನೆ ಕುಳಿತು ಭೋಜನ ಮಾಡಬಾರದು ; ಅಕೆಯು ಭೋಜನಮಾಡುವಾಗಲೂ, ತೀನುತ್ತಿರುವಲ್ಲಿಯೂ, ಅಕಳಿಸುತ್ತಿರುವಾಗಲೂ, ಸ್ವಸ್ಥಳಾಗಿ ಕುಳಿತಿರುವಲ್ಲಿಯೂ, ಕಣ್ಣಿಗೆ ಕಾಡಿಗೆ ಹಚ್ಚಿಕೊಳ್ಳುತ್ತಿರುವಲ್ಲಿಯೂ, ಸ್ನಾನಮಾಡುತ್ತಿರುವಲ್ಲಿಯೂ, ಬತ್ತಲೆಯಾಗಿರುವಲ್ಲಿಯೂ, ವಸ್ತ್ರ ಬದಲಾಯಿ ಸುತ್ತಿರುವಲ್ಲಿಯೂ, ಹೆರಿಗೆಯ ಸಮಯದಲ್ಲಿಯೂ ಗಂಡನಾದವನು ನಿಲ್ಲಬಾರದು ! ನೋಡಬಾರದು !! ಈ ರೀತಿಯಲ್ಲಿ ಸರ್ವೇಂದ್ರಿಯಗಳನ್ನು ಸ್ಥಿಮಿತದಲ್ಲಿರಿಸಿ ಕೊಂಡು ಧರ್ಮೋಕ್ತಿಯಂತೆ ಜೀವನ ನಡೆಸುತ್ತಿರುವ ಗೃಹಸ್ಥಾಶ್ರಮ ಪುರುಷನ ಪ್ರಯತ್ನಕ್ಕೆ ಅಸಾಧ್ಯವಾದ ಕೆಲಸವು ಈ ಭೂಲೋಕದಲ್ಲಾಗಲೀ ಆಕಾಶದಲ್ಲಾಗಲೀ ಪಾತಾಳದಲ್ಲಾಗಲೀ ಸ್ವರ್ಗದಲ್ಲಾಗಲೀ ಯಾವುದೂ ಇಲ್ಲ.



"ಗೋರಕ್ಷಣ"

ಪ್ರತಿ ತಿಂಗಳ ತಾ|| 1 ರಲ್ಲಿ ಪ್ರಕಟವಾಗುವ 'ಗೋರಕ್ಷಣ' ದಲ್ಲಿ ಗೋರಕ್ಷಣೆ, ಪ್ರಾಣಿದಯೆ, ಸಸ್ಯಾಹಾರ, ಪಶುವೈದ್ಯ, ಇವುಗಳನ್ನು ಕುರಿತಾದ ಲೇಖನಗಳು ಪ್ರಕಟಿಸಲ್ಪಡುವು

ಪತ್ರಿಕೆಗೆ ಪೋಷಕರಾಗಿಯೂ, ಚಂದಾದಾರರಾಗಿಯೂ, ಲೇಖಕರಾಗಿಯೂ ಪ್ರಚಾರಕರಾಗಿಯೂ ಸಹಕಾರ ನೀಡುವ ಮಹನೀಯರಿಗೆ ವಂದನೆಗಳು.

ಅನುಕೂಲವಾದಂತೆಲ್ಲಾ ಪುಟ ಸಂಖ್ಯೆ ಹೆಚ್ಚಿಸಲಾಗುತ್ತೆ.

ವಿಳಾಸ: 'ಗೋರಕ್ಷಣ' ಸತ್ಯವಾದಿ ಆಫೀಸ್, ಮೈಸೂರು

Announcement

Theatre building old materials and furniture are being sold very cheap.

Apply to—
NEW OPERA TALKIES
MYSORE

ಸಿನೆಮಾ ಕಟ್ಟಡದ ಹಳೇ ಸಾಮಾನುಗಳೂ ಫರ್ನೀಚರುಗಳೂ ಸುಲಭ ಬೆಲೆಗೆ ಮಾರಾಟಕ್ಕಿವೆ.

ವಿವರಗಳಿಗೆ—
ನ್ಯೂ ಅಪೇರಾ ಟಾಕೀಸ್
ಮೈಸೂರು

ಐ. ಟಿ. ಎಲ್. ಗ್ರೈಪ್ ಸಿರಪ್

ನಿಮ್ಮ ಮುದ್ದು ಕಂದನ
ಅಜೀರ್ಣ ವ್ಯಾಧಿಗಳನ್ನು ತಡೆದು
ಆರೋಗ್ಯ ಕಾಪಾಡುವ ಅಮೃತಪಾನ

— ತಯಾರಕರು —
ದಿ ಮೈಸೂರು ಇಂಡೆಸ್ಟ್ರಿಯಲ್
ಅಂಡ್ ಟೆಸ್ಟಿಂಗ್ ಲ್ಯಾಬೊರೇಟರಿ
ಲಿ ಮಿ ಟೆ ಡ್
ಮಲ್ಲೇಶ್ವರಂ ಪೋಸ್ಟ್, ಬೆಂಗಳೂರು 3



ಶ್ರೇಷ್ಠತೆಯ ಹೆಗ್ಗುರುತು
ITL ಗ್ರೈಪ್ ಸಿರಪ್

ಉಡುಪಿ

ಮ

ಪ್ರದರ್ಶನ 3 ಗಂಟೆಗೆ

ನ — 30—3—51 ರಿಂದ — 3 ದಿನಗಳು

ಕ್ಯಾಪ್ಟನ್ ಮಾರ್ವೆಲ್" (ರಿಪಬ್ಲಿಕ್ ಸೀರಿಯಲ್)

ಕೀರ್ತಿಯುತ 4 ನೇ ವಾರ

ದಿಲೀಪ ಕುಮಾರ್, ಮುನ್ನೂರ ಸುಲ್ತಾನ ಪಾತ್ರವಹಿಸಿರುವ

BUL ಬಾ ಬು ಲ್

ಚಿತ್ರ — — ಪ್ರತಿ ದಿನ 3 ಪ್ರದರ್ಶನಗಳು

ನ — 30—3—51 ರಿಂದ 3 ದಿವಸಗಳು

ಪಾತ್ರ— ಮುನ್ನೂರ ಸುಲ್ತಾನ, ಸೂರೈಯ

hed by M. S. Krishna Rao. at the
Mysore